

ಮತ್ತೊಮ್ಮೆ ನಾವು ಮದುವೆಗೆ ಹೊರಡಲು ಸಿದ್ದರಾಗಿ ನಿಂತಿದ್ದಾಗ, ಹೀಗೆಯೇ ತಪ್ಪಿಸಿಕೊಂಡು ರಸ್ತೆಗಿಳಿದ ವಿಂಟರ್‌ನ ಹಿಂದೆ ನಾನು ಮತ್ತು ನನ್ನ ತಂಗಿ, ಉಟ್ಟ ಕಾಜೀವರಂ ಸೀರೆ ಹೊತ್ತು ಓಡಿದೆವು. ಆ ಹೆದ್ದಾರಿಯಲ್ಲಿ ವಾಹನಗಳ ನಡುವೆ ಅಡ್ಡಾದಿಡ್ಡಿ ಓಡಿದ ವಿಂಟರ್, ಕೊನೆಗೂ ಕೈಗೆ ಸಿಕ್ಕಾಗ ಉಸಿರು ಕಟ್ಟಿದಂತಾಗಿ ಮನೆಗೆ ಹಿಂತಿರುಗಿದ್ದನ್ನು ಮರೆಯಲಾದೀತೇ? ಹೆದ್ದಾರಿಯ ವಾಹನಗಳ ನಡುವೆ ಓಡುತ್ತಿರುವ ನಾಯಿಯ ಹಿಂದೆ ಹೀಗೆ ಕಾಂಜೀವರಂ ಸೀರೆ ಉಟ್ಟ ಹೆಂಗಸರಿಬ್ಬರು ಓಡುತ್ತಿರುವ ದೃಶ್ಯ ಹೇಗಿರಬಹುದು.. ಕಲ್ಪಿಸಿಕೊಳ್ಳಿ!

ಇನ್ನೊಮ್ಮೆ ವಿಂಟರ್, ಕಿರು ಓಣಿಯಲ್ಲಿ ಓಡಿ ಇತರ ನಾಯಿಗಳ ಆಘಾತಕ್ಕೆ ಸಿಲುಕಿ ದೊಡ್ಡ ಕಾಳಗ ನಡೆಯಿತು. ಆ ದನಿ ಕೇಳಿದ ಬುಶ್ ಅಷ್ಟೆತ್ತರದ ದರೆಯ ಮೇಲೆ ತನ್ನ ಭೀಮಕಾಯವನ್ನು ಚಿಮ್ಮಿಸಿ ಅದು ಹೇಗೆ ನೆರವಿಗೆ ಧಾವಿಸಿದನೋ! ನೆರೆಮನೆಯವರಿಂದ ನಮಗೆ ಸಹಸ್ರನಾಮಾರ್ಚನೆ ಆಗಿತ್ತು!

ಅಪರೂಪಕ್ಕೆ ಬುಶ್ ಮತ್ತು ವಿಂಟರ್ ನಡುವೆಯೂ ಘನಘೋರ ಕಾಳಗ ನಡೆಯುತ್ತಿತ್ತು. ಅವರನ್ನು ಬೇರ್ಪಡಿಸುವಲ್ಲಿ ನಾವು ಅರೆಜೀವವಾಗುತ್ತಿದ್ದೆವು. ತಿನ್ನುವಾಗ ಸಲಿಗೆಯಿಂದ ಹಾಗೂ ಹೊಟ್ಟೆಬಾಕತನದಿಂದ ಡೈನಿಂಗ್ ಟೇಬಲ್ ಕೆಳಗೆ ಅವಿತು ಅಣ್ಣ  ಕೊಟ್ಟುದನ್ನು ಕಟಕ್ ಎಂದು ಕಡಿವ ಬುಶ್‌ನನ್ನು ಕಂಡು ವಿಂಟರ್ ಗುರ್ರ್ ಎಂದರೆ ಸಾಕು, ಮರುಕ್ಷಣ ಇಬ್ಬರೂ ಒಬ್ಬರ ಮೇಲೊಬ್ಬರೆರಗಿ ಕಾದುತ್ತಿದ್ದರು.

ಒಂದು ಬೆಳಿಗ್ಗೆ ಬೆಳಗಿನ ವ್ಯಾಯಾಮಕ್ಕಾಗಿ ಬಿಟ್ಟಿದ್ದೆ. ಸಹಾಯಕಿ ಶ್ವೇತಾ ಅಂಗಳ ಗುಡಿಸುತ್ತಿದ್ದಳು. ಅಷ್ಟರಲ್ಲೇ ಇಬ್ಬರ ರೋಷದ ಬೊಗಳುವಿಕೆ ಕೇಳಿಸಿತು. ನೋಡಿದರೆ ದೊಡ್ಡದೊಂದು ಹಾವಿನ ಎರಡೂ ಬದಿಗಳಲ್ಲಿ ನಿಂತು ಆಕ್ರಮಣಕ್ಕೆ ಸಿದ್ಧರಾಗಿದ್ದರು. ಶ್ವೇತಾ ಬುಶ್‌ನನ್ನು ಹೇಗೋ ಅತ್ತ ಎಳೆದಳು. ಮಾಸಲು ಬೂದು ಬಣ್ಣದ ದಪ್ಪನೆಯ ದೊಡ್ಡ ಹಾವು, ತಲೆಯನ್ನು ದೇಹದ ಮಧ್ಯೆ ಅಡಗಿಸಿತ್ತು. ಒಂದು ಕಡೆಯ ದಾರಿ ಮುಕ್ತವಾದೊಡನೆ ಹಾವು ಸುರುಳಿ ಬಿಚ್ಚಿ ಜೋರಾಗಿ ಭುಸುಗುಟ್ಟುತ್ತಾ ಬಾವಿಕಟ್ಟೆಯತ್ತ ಸರಿದು ಹೋಯಿತು. ಹೆಡೆಯೇನೂ ಕಾಣದುದರಿಂದ ಅದು ಕೊಳಕುಮಂಡಲವೇ (ಕಂದೊಡಿ) ಇರಬೇಕೆಂದುಕೊಂಡೆ. ಅವೂ ಭುಸುಗುಟ್ಟುತ್ತವೆ. ವಿಷಯುಕ್ತ ಹಾವುಗಳಾದರೆ ನಾಯಿಗಳ ಬೊಗಳಾಟದಿಂದಲೇ ಗೊತ್ತಾಗುತ್ತದೆ. ಸಾಮಾನ್ಯ ಕೇರೆ ಹಾವು ಬಂದರೆ ವಿಂಟರ್ ಮತ್ತು ಬುಶ್ ಕ್ಯಾರೇ ಅನ್ನುವುದಿಲ್ಲ!

ನಾನು ಮುಂಬೈಗೆ ಹೋಗುವಾಗ ಕಾಲುಗಳನ್ನು ತಬ್ಬಿ ಹಿಡಿಯುತ್ತಿದ್ದವು. ಮುಂಬೈಯಿಂದ ವಾಪಸಾದ ದಿನ ಅದೇನು ಸಂತಸ, ಖುಷಿಯ ನೆಗೆದಾಟ! ಹದಿನಾಲ್ಕು ವರ್ಷಗಳು ನಮ್ಮೊಡನಿದ್ದ ಪ್ರಿಯ ಜೀವಗಳು! ಪ್ರಾಯಸಹಜ ದೌರ್ಬಲ್ಯಗಳಿಂದ ನಮ್ಮ ಮಣ್ಣಲ್ಲಿ ಒಂದಾಗಿ ಹೋದವರು! ಅವತ್ತು ಊರಿಗೆ ಮರಳಿದಾಗ 'ಅದೋ, ಅಲ್ಲಿ ಮಲಗಿದ್ದಾರೆ' ಎಂದು ಅಮ್ಮ ತೋರಿದ, ಅವರು ಚಿರನಿದ್ರೆಯಲ್ಲಿ ಪವಡಿಸಿದ ಆ ನೆಲವೂ ಈಗ ನಮ್ಮದಲ್ಲ. ಆ ನೆಲದ ಮೇಲೆ ಚತುಷ್ಪಥ ಹೆದ್ದಾರಿ ಮಲಗಿದೆ! ಈಗಲೂ ನನ್ನ ಕನಸಿನಲ್ಲಿ ಆಗಾಗ್ಗೆ ಬರುವ ವಿಂಟರ್ ತನ್ನ ಜಿಂಕೆ ಕಂಗಳಿಂದ  ನನ್ನನ್ನೇ ದಿಟ್ಟಿಸುತ್ತಾನೆ.